## 8. ಗಮನ ಸೆಳೆಯುವ ಸೂಚನೆ

**ಉಪಾಧ್ಯಕ್ಷರು:** ಮಾನ್ಯ ಜಿ.ಹೆಚ್.ಶ್ರೀನಿವಾಸ್‌ರವರು ಹಾಜರಿಲ್ಲ. ಶ್ರೀ ಬಸವರಾಜ ನೀಲಪ್ಪ ಶಿವಣ್ಣನವರ್‌ರವರು ಹಾಜರಿಲ್ಲ. ಶ್ರೀ ಎಂ.ಸತೀಶ್‌ರೆಡ್ಡಿಯವರು ಹಾಜರಿಲ್ಲ. ಶ್ರೀ ಹೆಚ್.ಎಸ್.ಶಿವಶಂಕರ್‌ರವರು ಹಾಜರಿಲ್ಲ. ಶ್ರೀ ವಿಶ್ವನಾಥ್ (ಆನಂದ) ಚಂದ್ರಶೇಖರ್ ಮಾಮನಿಯವರು ಹಾಜರಿಲ್ಲ. ಶ್ರೀ ಕೆ.ಆರ್.ರಮೇಶ್‌ಕುಮಾರ್‌ರವರು ಹಾಜರಿಲ್ಲ. ಶ್ರೀ ಜೆ.ಆರ್.ಲೋಬೋರವರು ಮಾತನಾಡುವುದು.

1. **ವಿಷಯ:** ಅಲ್ಪಸಂಖ್ಯಾತರ ಸಂಸ್ಥೆಯೆಂದು ಘೋಷಿಸದಿರುವ ಬಗ್ಗೆ.

********

**ಶ್ರೀ ಜೆ.ಆರ್. ಲೋಬೋ (ಮಂಗಳೂರು ನಗರ ದಕ್ಷಿಣ):** ಮಾನ್ಯ ಉಪಾಧ್ಯಕ್ಷರೆ, ನಮ್ಮಲ್ಲಿ ಮಧ್ವ ಕಾಲೇಜು ಅಲ್ಪಸಂಖ್ಯಾತರ ಕಾಲೇಜು.

**ಉಪಾಧ್ಯಕ್ಷರು:** ಇಂತಹ ವಿಷಯ ಎಂದು ಗಮನ ಸೆಳೆದುಬಿಡಿ ಸಾಕು.

**ಶ್ರೀ ಜೆ.ಆರ್. ಲೋಬೋ:** ಅಲ್ಲಿ ಶೇ.50ಕ್ಕಿಂತ ಜಾಸ್ತಿ ವಿದ್ಯಾರ್ಥಿಗಳು ಇದ್ದರೂ ಕೂಡ ಅದಕ್ಕೆ ಅಲ್ಪಸಂಖ್ಯಾತರ ದೃಢ ಪತ್ರ ಇನ್ನೂ ಕೊಡುತ್ತಿಲ್ಲ. ಅದರ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನವನ್ನು ಸೆಳೆಯಲು ಬಯಸುತ್ತಿದ್ದೇನೆ.

**ಉಪಾಧ್ಯಕ್ಷರು:** ಉತ್ತರ ಬಂದಿದೆಯೇ?

**ಶ್ರೀ ಜೆ.ಆರ್. ಲೋಬೋ:** ಉತ್ತರ ಏನೂ ಬಂದಿಲ್ಲ.

**ಉಪಾಧ್ಯಕ್ಷರು:** ಮಾನ್ಯ ಸಚಿವರು ಹಾಜರಿಲ್ಲ. ನಾಳೆ ಉತ್ತರ ಕೊಡಿಸೋಣ ಬಿಡಿ. ಮಾನ್ಯ ನಾರಾಯಣಗೌಡರವರು ಹಾಜರಿಲ್ಲ. ಶ್ರೀ ಹೆಚ್.ಡಿ.ರೇವಣ್ಣರವರು ಹಾಜರಿಲ್ಲ. ಶ್ರೀ ಪಿ.ಆರ್.ಸುಧಾಕರ್‌ಲಾಲ್‌ರವರು ಮಾತನಾಡುವುದು.